ನಿಗಾವಹಿಸದಿದ್ದರೆ ಐವತ್ತು ಭಾಗ ಹಣವು ಸೋರಿ ಹೋಗುತ್ತದೆ. ತಾವೇನು 471 ಕೋಟಿ ರೂ. ಮತ್ತು 18 ಕೋಟಿ ರೂ.ಗಳ ಯೋಜನೆಯನ್ನು ಇಟ್ಟುಕೊಂಡಿದ್ದೀರಿ, ಅದರ ಹಣವು ನೂರು ಪರ್ಸೆಂಟ್ ಉಪಯೋಗವಾಗುವಲ್ಲಿ ಏನು ಕ್ರಮ ಇಟ್ಟುಕೊಂಡಿದ್ದೀರಿ? ತಪ್ಪಿತಸ್ಥರ ಮೇಲೆ ಕಾನೂನಿನ ಅನುಸಾರ ಶಿಸ್ತಿನ ಕ್ರಮ ತೆಗೆದುಕೊಳ್ಳಲು ವ್ಯವಸ್ಥೆಯನ್ನೇನಾದರೂ ಮಾಡುತ್ತೀರಾ?

ಶ್ರೀ ವಿ. ಮುನಿಯಪ್ಪ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕ್ಷೇತ್ರ ಬಹುಶ: ಬೀಳಗಿ ತಾಲ್ಲೂಕು. ಆ ತಾಲ್ಲೂಕು ಸಧ್ಯಕ್ಕೆ ಸಮಸ್ಯಾತ್ಮಕ ತಾಲ್ಲೂಕುಗಳಲ್ಲಿ ಸೇರಿಲ್ಲ. ಅವರ ತಾಲ್ಲೂಕು ಕಪ್ಪು, ಇಲ್ಲವೆ ಬೂದು ಬಣ್ಣದೆಂದು ನಮ್ಮ ಇಲಾಖೆಯವರು ಘೋಷಣೆ ಮಾಡಿಲ್ಲ. ಅವರ ಕ್ಷೇತ್ರ ಬಿಳಿ ಪ್ರದೇಶವೆಂದು ಘೋಷಣೆ ಮಾಡಿದ್ದೇವೆ. ಅವರ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಅಷ್ಟಾಗಿ ಕುಸಿದಿಲ್ಲ. ಆದರೆ ಬಿಜಾಪುರ ಜಿಲ್ಲೆಯ ಬಾಗೇವಾಡಿ, ಬಿಜಾಪುರ, ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿ ಕಪ್ಪು ಮತ್ತು ಬೂದು ಬಣ್ಣದಿಂದ ಗುರುತು ಮಾಡಿದ್ದೇವೆ. ನಾವೇನು 471 ಕೋಟಿ ರೂ.ಗಳ ಯೋಜನೆಯನ್ನು ಇಟ್ಟುಕೊಂಡಿದ್ದೇವೆ ಅದರಲ್ಲಿ ಇದಕ್ಕೆ 10 ಕೋಟಿ 83 ಲಕ್ಷ ರೂ. ಖರ್ಚು ಮಾಡಬೇಕೆಂದು ಉದ್ದೇಶಿಸಿದ್ದೇವೆ. ಇದರಲ್ಲಿ 1212 ಸ್ಟ್ರಕ್ಚರ್ಸ್‌ನ್ನು ಕಟ್ಟಬೇಕೆಂದು ಸರ್ಕಾರ ಯೋಜನೆಯನ್ನು ಹಾಕಿಕೊಂಡಿದೆ.

ಸೇಡಂ ತಾಲ್ಲೂಕಿನ ವಿದ್ಯುತ್ ಪ್ರಸರಣಾ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಹುದ್ದೆ.

261(2902) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವಿದ್ಯುತ್ ಪ್ರಸರಣ ಉಪವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇಲ್ಲದೇ ವಿದ್ಯುಚ್ಛಕ್ತಿಯ ಕಾರ್ಯನಿರ್ವಹಣೆಗೆ ತೊಂದರೆಯುಂಟಾಗಿರುವುದು ನಿಜವಲ್ಲವೇ?

ಆ) ಈ ಉಪ ವಿಭಾಗದಲ್ಲಿ ಈಗಾಗಲೇ ಖಾಲಿ ಇರುವ ಒಟ್ಟು ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ; (ಹುದ್ದೆಗಳ ವಿವರ ನೀಡುವುದು)

ಇ) ಇದರಿಂದ ಪ್ರತಿದಿನ ವಿದ್ಯುತ್ ಸಂಪರ್ಕಕ್ಕಾಗಿ ರೈತರು ನಾಗರೀಕರು ಎದುರಿಸುತ್ತಿರುವ ತೊಂದರೆಯಿಂದ ರೈತರ ಬೆಳೆ ಹಾನಿಯಾಗಿ ನಷ್ಟವಾಗುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ರೈತರಿಗೆ ನಾಗರೀಕರಿಗೆ ನಷ್ಟವಾಗುವುದನ್ನು ತಪ್ಪಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಯನ್ನು ತುಂಬಿ ಕೂಡಲೇ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ವೀರಕುಮಾರ್ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ) ಈ ಉಪ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಸ್ಥಾನದಲ್ಲಿ ಸಹಾಯಕ ಇಂಜಿನಿಯರ್‌ರೊಬ್ಬರು ಕಾರ್ಯನಿರ್ವಹಿಸುತ್ತಿರುವುದರಿಂದ ವಿದ್ಯುಚ್ಛಕ್ತಿಯ ಕಾರ್ಯನಿರ್ವಹಣೆಗೆ ತೊಂದರೆ ಆಗುತ್ತಿರುವುದಿಲ್ಲ.

ಆ) ಈ ಉಪ ವಿಭಾಗದಲ್ಲಿ ಖಾಲಿ ಇರುವ ಒಟ್ಟು ಸಿಬ್ಬಂದಿ ಸಂಖ್ಯೆ 26 ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಇದು ಸಿಬ್ಬಂದಿಯಿಂದಲೇ ಕೆಲಸ ಮಾಡಿಸಿ ರೈತರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

ಈ) ಸದ್ಯಕ್ಕೆ ಪ್ರಭಾರ ವ್ಯವಸ್ಥೆಯನ್ನು ಮಾಡಲಾಗಿದೆ. ಖಾಲಿ ಹುದ್ದೆ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಬಸವಂತರೆಡ್ಡಿ ಮೊತಕಪಲ್ಲಿರವರ ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ 2902ಕ್ಕೆ ಅನುಬಂಧ

ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದ ಸೇಡಂ ಉಪ-ವಿಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಗಳ ವಿವರಗಳು

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಖಾಲಿ ಇರುವ ಹುದ್ದೆಗಳ ಸಂಖ್ಯೆ
1.	ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಡಿ)	1
2.	ಸಹಾಯಕ ಇಂಜಿನಿಯರ್ (ಡಿ)	3
3.	ಮೆಕ್ಯಾನಿಕ್ ಗ್ರೇಡ್ - 2	1
4.	ಮಾರ್ಗದಾಳು	3
5.	ಸಹಾಯಕ ಮಾರ್ಗದಾಳು	16
6.	ಸಹಾಯಕ	1
7.	ಬೆರಳಚ್ಚುಗಾರರು	1
	ಒಟ್ಟು	26

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ :— ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ ಈ ಉಪ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಸ್ಥಾನದಲ್ಲಿ ಸಹಾಯಕ ಇಂಜಿನಿಯರ್‌ರೊಬ್ಬರು ಕಾರ್ಯ

ನಿರ್ವಹಿಸುತ್ತಿರುವುದರಿಂದ ವಿದ್ಯುಚ್ಛಕ್ತಿಯ ಕಾರ್ಯ ನಿರ್ವಹಣೆಗೆ ತೊಂದರೆಯಾಗುತ್ತಿರುವುದಿಲ್ಲವೆಂದು ಉತ್ತರ ನೀಡಿರುತ್ತಾರೆ. ಇದರಿಂದ ಪ್ರತಿದಿನ ವಿದ್ಯುತ್ ಸಂಪರ್ಕಕ್ಕಾಗಿ ರೈತರು, ನಾಗರೀಕರು ಎದುರಿಸುತ್ತಿರುವ ತೊಂಜರೆಯಿಂದ ರೈತರ ಬೆಳೆ ಹಾನಿಯಾಗಿ ನಷ್ಟವಾಗುವುದು ನಿಜವಲ್ಲವೇ ಎಂಬ ನನ್ನ ಪ್ರಶ್ನೆಗೆ ಇದ್ದ ಸಿಬ್ಬಂದಿಯಿಂದಲೇ ಕೆಲಸ ಮಾಡಿಸಿ ರೈತರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಪ್ರಯತ್ನಿಸಲಾಗುತ್ತಿದೆಯೆಂದು ಉತ್ತರ ನೀಡಿರುತ್ತಾರೆ. ಈ ಉಪವಿಭಾಗದಲ್ಲಿ ಸಹಾಯಕ ಇಂಜಿನಿಯರ್ ಮೂರು ಹುದ್ದೆಗಳು, ಮೆಕಾನಿಕ್ ಗ್ರೇಡ್ ಒಂದು, ಮಾರ್ಗದಾಳು ಮೂರು, ಸಹಾಯಕ ಮಾರ್ಗದಾಳು 16 ಹುದ್ದೆಗಳು ಈ ರೀತಿಯಾಗಿ ಒಟ್ಟು 26 ಹುದ್ದೆಗಳು ಖಾಲಿ ಇದೆ. ಇಷ್ಟು ಹುದ್ದೆಗಳು ಖಾಲಿ ಇರುವುದರಿಂದ ನಮ್ಮ ಆಂಧ್ರ ಗಡಿ ಭಾಗದ ರೈತರು ಭತ್ತ ಮತ್ತು ಇತರೆ ಬೆಳೆಗಳನ್ನು ಬೆಳೆದರೆ ಒಣಗಿಹೋಗುತ್ತಿದೆ.

12.00 ಪಿ.ಎಂ.

ಆದುದರಿಂದ ಸಹಾಯಕ ಇಂಜಿನಿಯರ್‌ರವರನ್ನು ಮತ್ತು ಖಾಲಿ ಇರುವ 25 ಸಿಬ್ಬಂದಿ ವರ್ಗದವರ ಹುದ್ದೆಗಳನ್ನು ತುಂಬಿ ರೈತರಿಗೆ ನಷ್ಟವಾಗದಂತೆ ವ್ಯವಸ್ಥೆ ಮಾಡಲು ಮಾನ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ವೀರಕುಮಾರ್ ಆ. ಪಾಟೀಲ್:— ಮಾನ್ಯ ಅಧ್ಯಕ್ಷರೇ, ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಅವರನ್ನು ಪೋಸ್ಟಿಂಗ್ ಮಾಡುವ ಸಲುವಾಗಿ ಈಗಾಗಲೇ ಆದೇಶವನ್ನು ಹೊರಡಿಸಲಾಗಿದೆ. ಸ್ಟೇಷನ್ ಮೈಂಟೇನೆನ್ಸ್ ಸಲುವಾಗಿ ನಾವು ಕಾಂಟ್ರಾಕ್ಟ್ ಕೊಡುತ್ತಿದ್ದೇವೆ. ಅಲ್ಲಿ ಇನ್ನೇನಾದರೂ ತೊಂದರೆ ಉದ್ಭವಿಸಿದಲ್ಲಿ ನಾನು ಅದನ್ನು ಅಟೆಂಡ್ ಮಾಡುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್:— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನೀಡಿದ ಉತ್ತರದಲ್ಲಿ ತಿಳಿಸಿರುವಂತೆ ಖಾಲಿ ಇರುವ ಇನ್ನಿತರ ಹುದ್ದೆಗಳನ್ನೂ ಸಹ ತುಂಬಿಕೊಳ್ಳಲು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಕಳೆದ ಬಾರಿಯ ಅಧಿವೇಶನದಲ್ಲಿ ನಾನು ಇದೇ ರೀತಿಯ ಪ್ರಶ್ನೆಯೊಂದನ್ನು ಕೇಳಿದ್ದೆ. ಕೆ.ಇ.ಬಿ.ಯಲ್ಲಿ ಎ.ಇ., ಎ.ಇ.ಇ. ಸೇರಿದಂತೆ ಮೀಟರ್ ರೀಡರ್, ಪ್ರ.ದ.ಸ. ಹುದ್ದೆಗಳು ಖಾಲಿ ಇವೆ. ಇವತ್ತು ಅವ್ಯವಸ್ಥೆಯಿಂದ ಕೂಡಿರುವ ಇಲಾಖೆ ಯಾವುದಾದರೂ ಇದ್ದರೆ ಅದು ಕೆ.ಇ.ಬಿ. ಎಂದು ಹೇಳದೆ ವಿಧಿಯಿಲ್ಲದಂತಾಗಿದೆ. ಖಾಲಿ ಇರುವ ಲೈನ್‌ಮೆನ್ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಕೇವಲ ಭರವಸೆ ಕೊಡದೇ ತಕ್ಷಣವೇ ಅವರ ನೇಮಕಾತಿ ಮಾಡಿಕೊಂಡು ಖಾಲಿ ಹುದ್ದೆಗಳನ್ನು ತುಂಬುವಂತಹ ಕಾರ್ಯಕ್ರಮವನ್ನು ತೀವ್ರದಲ್ಲೇ ಮಾಡಬೇಕೆಂದು ನಾನು ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ವೀರಕುಮಾರ್ ಆ. ಪಾಟೀಲ್:— ಮಾನ್ಯ ಅಧ್ಯಕ್ಷರೇ, ಬಡ್ತಿ ಮೂಲಕ ಈಗ ನಾವು ಹುದ್ದೆಗಳನ್ನು ತುಂಬುತ್ತಿದ್ದೇವೆ. ಶೀಘ್ರದಲ್ಲೇ ಲೈನ್‌ಮೆನ್, ಅಸಿಸ್ಟೆಂಟ್ ಲೈನ್‌ಮೆನ್, ಗ್ಯಾಂಗ್‌ಮೆನ್ ಹುದ್ದೆಗಳನ್ನು ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಅಭ್ಯರ್ಥಿಗಳನ್ನು

ತೆಗೆದುಕೊಂಡು ಅವುಗಳನ್ನು ತುಂಬಿ ಕೆಲಸ ಶೀಘ್ರವಾಗಿ ಆಗುವಂತೆ ಮಾಡಲು ನಾನು ಪ್ರಯತ್ನಪಡುತ್ತೇನೆ.

ಪ್ರಶ್ನೆ ಸಂಖ್ಯೆ 262(3162)

ಅಧ್ಯಕ್ಷರು :— ಮಾನ್ಯ ಸುಭಾಶ್ ಕಲ್ಲೂರ್‌ರವರೇ, ಮಾನ್ಯ ಗೃಹ ಸಚಿವರು ತಮ್ಮ ಪ್ರಶ್ನೆಗೆ ಉತ್ತರಿಸಲು ಒಂದು ವಾರ ಟೈಮ್ ಕೇಳಿದ್ದಾರೆ. ನಿಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ಸದರಿ ಪ್ರಶ್ನೆಗೆ ಉತ್ತರಿಸಲು ನಾನು ಟೈಮ್ ಕೇಳಿಲ್ಲ. ಆ ಪ್ರಶ್ನೆ ಸಾರಿಗೆ ಇಲಾಖೆಗೆ ವರ್ಗಾವಣೆಯಾಗಿದೆ.

ಅಧ್ಯಕ್ಷರು :— ಇಲ್ಲಿ ಟೈಮ್ ಕೇಳಿದ್ದಾರೆ ಎಂದು ಮಾಹಿತಿ ಇದ್ದರಿಂದ ಆ ರೀತಿ ಹೇಳಿದೆ. ಒಟ್ಟಿನಲ್ಲಿ ಈ ಪ್ರಶ್ನೆ ವರ್ಗಾವಣೆಯಾಗಿ ಉತ್ತರಿಸಲು ಸಮಯ ಕೇಳಿದ್ದಾರೆ.

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಯ ಪ್ರಗತಿ.

263(2862) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು, (ಶಿವಾಜಿನಗರ) :— ಮಾನ್ಯ ಒಳಾಡಳಿತ, ನಾಗರೀಕ ವಿಮಾನಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಯೋಜನೆಯ ಪ್ರಗತಿ ಬಗ್ಗೆ ಪೂರ್ಣ ವಿವರ ನೀಡುವುದು?

ಆ) ಈ ವಿಮಾನ ನಿಲ್ದಾಣದ ಕಾಮಗಾರಿ ಯಾವಾಗ ಪ್ರಾರಂಭವಾಗುವುದು;

ಇ) ಈ ವಿಮಾನ ನಿಲ್ದಾಣ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಒಳಾಡಳಿತ, ನಾಗರೀಕ ವಿಮಾನಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು) :—

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣದಲ್ಲಿ ಈ ಕೆಳಕಂಡ ಪ್ರಗತಿ ಮಾಡಲಾಗಿದೆ.

1. ಬೆಂಗಳೂರು ದೇವನಹಳ್ಳಿ ಬಳಿ ನೂತನ ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಭಾರತ ಸರ್ಕಾರವು ತತ್ವಶಃ ಒಳಗೊಂಡ ಒಪ್ಪಿಗೆಯನ್ನು ನೀಡಿದೆ.

2. ಹಾಗೂ ಭಾರತ ಸರ್ಕಾರವು ಪ್ರಸ್ತುತ ಚಾಲನೆಯಲ್ಲಿರುವ ಎಚ್.ಎ.ಎಲ್. ವಿಮಾನ ನಿಲ್ದಾಣವನ್ನು ನೂತನ ವಿಮಾನ ನಿಲ್ದಾಣದ ಕಾರ್ಯಾಚರಣೆ ಪ್ರಾರಂಭವಾದ ನಂತರ ಮುಚ್ಚಲೂ ಒಪ್ಪಿಕೊಂಡಿರುತ್ತದೆ.